# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತ ಗಂಗೋತ್ರಿ, ಮೈಸೂರು-570 006.

**ಆಡಳಿತ ವಿಭಾಗ**

ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-02/246/2025-26 ದಿನಾಂಕ: 12.02.2026

## ಅಧಿಸೂಚನೆ

**ವಿಷಯ:** ಉಪಕುಲಸಚಿವ ಹಾಗೂ ಉಪನಿರ್ದೇಶಕ ಹುದ್ದೆಯ ಪದೋನ್ನತಿಗೆ ಆಯ್ಕೆ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸುವ ಬಗೆಗೆ.

**ಉಲ್ಲೇಖ:** ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:12.02.2026.

*****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಹಾಲಿ ಉಪಕುಲಸಚಿವ/ ಉಪನಿರ್ದೇಶಕ ಹುದ್ದೆಯ ಸ್ವತಂತ್ರ ಪ್ರಭಾರ ಹಾಗೂ ಸಹಾಯಕ ಕುಲಸಚಿವರಾಗಿ ಕೆಲಸ ನಿರ್ವಹಿಸುತ್ತಿರುವ ಅರ್ಹ ನೌಕರರುಗಳಿಂದ ಖಾಲಿ ಇರುವ ಹಾಗೂ ಹೊಸದಾಗಿ ಸೃಜನೆಯಾಗುವ ಉಪಕುಲಸಚಿವ ಮತ್ತು ಉಪನಿರ್ದೇಶಕ ಹುದ್ದೆಗಳನ್ನು ಸ್ಥಾನಪನ್ನ ಆಧಾರದ ಮೇಲೆ ವಿಶ್ವವಿದ್ಯಾನಿಲಯದ ಪರಿನಿಯಮಗಳನ್ವಯ ಪದೋನ್ನತಿಗೆ ಆಯ್ಕೆ ಮಾಡಲು ಅರ್ಜಿಯನ್ನು ಆಹ್ವಾನಿಸಲಾಗಿದೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವೃಂದ ಮತ್ತು ನೇಮಕಾತಿ ಪರಿನಿಯಮದ ಪ್ರಕಾರ ಉಪಕುಲಸಚಿವ/ಉಪನಿರ್ದೇಶಕ ಹುದ್ದೆಯ ಪದೋನ್ನತಿಗೆ ಕ್ರಮವಹಿಸಲಾಗುವುದು.

ಆಯ್ಕೆಯ ವಿಧಾನ:- ನೇಮಕಾತಿ ಮಂಡಳಿಯ ಮೂಲಕ ಆಯ್ಕೆ ಮಾಡಲಾಗುವುದು.

ಈ ಸಂಬಂಧ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅರ್ಹ ಸಹಾಯಕ ಕುಲಸಚಿವರುಗಳು ಈ ಅಧಿಸೂಚನೆಯೊಂದಿಗಿರುವ ಅರ್ಜಿಯನ್ನು ಭರ್ತಿ ಮಾಡಿ 08ಪ್ರತಿಗಳಲ್ಲಿ(08ಸೆಟ್) ಪೂರಕ ದಾಖಲಾತಿಗಳೊಂದಿಗೆ(ನಕಲು) ಸ್ವಯಂ ದೃಡೀಕರಿಸಿ ಅರ್ಜಿಯನ್ನು ಸಲ್ಲಿಸಬಹುದಾಗಿರುತ್ತದೆ.

ಭರ್ತಿ ಮಾಡಿದ ಅರ್ಜಿಗಳನ್ನು ಮುಚ್ಚಿದ ಲಕೋಟೆಯಲ್ಲಿ **"ಉಪಕುಲಸಚಿವ/ಉಪನಿರ್ದೇಶಕ ಹುದ್ದೆಗಾಗಿ ಅರ್ಜಿ"** ಎಂದು ಲಕೋಟೆಯ ಮೇಲೆ ನಮೂದಿಸಿ **ಕುಲಸಚಿವರ ಕಛೇರಿಗೆ ದಿನಾಂಕ19.02.2026ರ ಸಂಜೆ 5.00 ಗಂಟೆಯೊಳಗೆ** ಸಲ್ಲಿಸುವಂತೆ ತಿಳಿಸಲಾಗಿದೆ.

ಆದೇಶದ ಮೇರೆಗೆ

**ಕುಲಸಚಿವ**

ಗೆ,

**ಉಪಕುಲಸಚಿವರು/ಉಪ ನಿರ್ದೇಶಕ(ಸ್ವ.ಪ್ರ) ಹಾಗೂ ಸಹಾಯಕ ಕುಲಸಚಿವರು, ಕರಾಮುವಿ.**

**ಪ್ರತಿ,**

1. ಎಲ್ಲಾ ಶಾಸನಬದ್ಧ ಅಧಿಕಾರಿಗಳ ಗಮನಕ್ಕೆ-ತಮ್ಮ ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿರುವ ಎಲ್ಲಾ ಉಪಕುಲಸಚಿವ/ಉಪನಿರ್ದೇಶಕ(ಸ್ವ.ಪ್ರ) ಹಾಗೂ ಸಹಾಯಕ ಕುಲಸಚಿವರುಗಳ ಗಮನಕ್ಕೆ ತರಲು ಕೋರಿದೆ.
2. ಡಾ. ನವೀನ್ ಕುಮಾರ್ ಸಿ.ಜಿ., ನೋಡಲ್ ಆಫೀಸರ್, ವೆಬ್‌ಸೈಟ್, ಕರಾಮುವಿ, ಮೈಸೂರು - ವಿ.ವಿ ನಿಲಯದ ವೆಬ್ ಸೈಟ್‌ನಲ್ಲಿ ಪ್ರಕಟಿಸಲು ತಿಳಿಸಿದೆ.
3. ಮಾನ್ಯ ಕುಲಪತಿಗಳ ಆಪ್ತ ಸಹಾಯಕರು, ಕರಾಮುವಿ, ಮೈಸೂರು.
4. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ಕರಾಮುವಿ, ಮೈಸೂರು.
5. ಕಚೇರಿ ಪ್ರತಿ/ಸಂಬಂಧಿಸಿದ ಕಡತಕ್ಕೆ.

# <u>ಅರ್ಜಿ ನಮೂನೆ</u>

ಗೆ,

ಕುಲಸಚಿವರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು.

ಮಾನ್ಯರೇ,

ದಿನಾಂಕ:______________________ರಂದು ಖಾಲಿ ಇರುವ ಹಾಗೂ ಹೊಸದಾಗಿ ಸೃಜನೆಯಾಗುವ ಉಪಕುಲಸಚಿವ ಹುದ್ದೆಗಳು ಮತ್ತು ಉಪ ನಿರ್ದೇಶಕ ಹುದ್ದೆಗಳ ಪದೋನ್ನತಿಗಾಗಿ ಅರ್ಜಿ ಸಲ್ಲಿಸುವ ಬಗೆಗೆ ಹೊರಡಿಸಿರುವ ಅಧಿಸೂಚನೆಯನ್ನು ಆಧರಿಸಿ ಉಪಕುಲಸಚಿವ/ಉಪನಿರ್ದೇಶಕರ ಹುದ್ದೆಯ ಪದೋನ್ನತಿಗಾಗಿ ದಾಖಲಾತಿಗಳೊಂದಿಗೆ ಅರ್ಜಿ ಸಲ್ಲಿಸುತ್ತಿದ್ದೇನೆ.

**ಸೇವಾ ವಿವರ**

| ಕ್ರಮ ಸಂಖ್ಯೆ | ವಿವರ | ಮಾಹಿತಿ |
|---|---|---|
| 1 | ನೌಕರನ/ಳ ಹೆಸರು | |
| 2 | ಜಾತಿ/ವರ್ಗ | |
| 3 | ವಿಳಾಸ | |
| 4 | ಜನ್ಮ ದಿನಾಂಕ | |
| 5 | ವಿದ್ಯಾರ್ಹತೆ | |
| 6 | ವಿಶ್ವವಿದ್ಯಾನಿಲಯಕ್ಕೆ ಕೆಲಸಕ್ಕೆ ಸೇರಿದ ದಿನಾಂಕ ಮತ್ತು ಹುದ್ದೆ | |
| 7 | ವಿಶ್ವವಿದ್ಯಾನಿಲಯವು ಪರೀಕ್ಷಾರ್ಥ ಅವಧಿ ಘೋಷಣೆ ಮಾಡಿದ ದಿನಾಂಕ | |
| 8 | ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹುದ್ದೆ, ಪಡೆಯುತ್ತಿರುವ ವೇತನ ಮತ್ತು ವೇತನ ಶ್ರೇಣಿ | |

| | | |
|---|---|---|
| **9** | **ಒಟ್ಟಾರೆ ಆಡಳಿತಾತ್ಮಕ ಅನುಭವ (ಹುದ್ದೆವಾರು ವಿವರ ನೀಡುವುದು)** | |
| **10** | **ಪ್ರಸ್ತುತ ಹುದ್ದೆಯಲ್ಲಿ ಸ್ಥಾನಪನ್ನಗೊಂಡ ನಂತರ ಸೇವಾ ಅನುಭವ (ವರ್ಷಗಳಲ್ಲಿ)ಯಾವ ದಿನಾಂಕದಿಂದ** | |
| **11** | **ಭಾಗವಹಿಸಿರುವ ಕಾರ್ಯಗಾರಗಳು/ ಶಿಬಿರಗಳ ವಿವರ** | |
| **12** | **ಇತರೆ** | |

ಮೇಲೆ ನೀಡಿರುವ ಮಾಹಿತಿಗಳು ಸರಿಯಾಗಿವೆ ಎಂದು ಪ್ರಮಾಣಿಕರಿಸುತ್ತೇನೆ.

**ನೌಕರನ/ಳ ಸಹಿ**

ಅಧಿಸೂಚನೆ ಸಂಖ್ಯೆ:ಕರಾಮುವಿ/______________________________ದಿನಾಂಕ:_______________.

ಉಪಕುಲಸಚಿವ ಹುದ್ದೆಯ ಪದೋನ್ನತಿಗಾಗಿ ಶ್ರೀ/ಶ್ರೀಮತಿ______________________________ರವರು ಸಲ್ಲಿಸುತ್ತಿರುವ ಅರ್ಜಿಯನ್ನು ಸೂಕ್ತ ಕ್ರಮಕ್ಕಾಗಿ ಕುಲಸಚಿವರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತಗಂಗೋತ್ರಿ, ಮೈಸೂರು ಇವರಿಗೆ ರವಾನಿಸಲಾಗಿದೆ.

ವಿಭಾಗದ ಮುಖ್ಯಸ್ಥರ ಸಹಿ
ಮತ್ತು ಮೊಹರು